ಶ್ರೀವಿಜಯದಾಸರ ವಿರಚಿತ

ಶ್ರೀ ಧನ್ವಂತರಿ ಸುಳಾದಿ

ಶ್ರೀಮಧ್ವರಾಜಗುರುಭ್ಯೋನಮಃ

ಆಯುರ್ವೃದ್ಧಿಯಾಗುವುದು ಯಶಸ್ಸು ಬರುವುದು
ಕಾಯನಿರ್ಮಲಿನ ಕಾರಣವಾಗುವುದು.
ಮಾಯಾ ಹಿಂದಾಗುವುದು, ನಾನಾ ರೋಗದ ಬೀಜ
ಬೇಯಿಸಿ ಕೆಳುವುದು ವೇಗಾದಿಂದ.
ನಾಯಿ ಮೊದಲಾದ ಕುತ್ಸಿತ ದೇಹ ನಿ-
ಕಾಯವಾಯಿತು ದುಷ್ಕರ್ಮದಿಂದ.
ಕ್ರಿಯಮಾಣಸಂಚಿತ ಭರಿತವಾಗಿದ್ದ ದುಃಖ
ಹೇಯಸಾಗರದೊಳು ಬಿದ್ದು ಬಳಲಿ,
ನೋಯಿಸಿಕೊಂಡು, ನೆಲೆಗಾನದೆ, ಒಮ್ಮೆ ತನ್ನ
ಬಾಯಲ್ಲಿ ವೈದ್ಯಮೂರ್ತಿ ಧನ್ವಂತರಿ
ರಾಯರಾ ಔಷಧಿ ನಿಯಮಾಕರ್ತಾ
ಶ್ರೀಯರಸನೆಂದು ತುತಿಸಲಾಗಿ,
ತಾಯಿ ಒದಗಿ ಬಂದು ಬಾಲನ್ನ ಸಾಕಿದಂತೆ
ನೋಯಗೊಡದೆ ನಮ್ಮನು ಪಾಲಿಪ-
ನಯ್ಯ, ದೇವಾದಿಗಳಿಗೆ ಧರ್ಮಜ್ಞಗುಣಸಾಂದ್ರ
ಶ್ರೇಯಸ್ಸು ಕೊಡುವನು ಭಜಕರಿಗೆ.
ಮಾಯಾಮಾತ್ರದಿಂದ ಜಗವೆಲ್ಲ ವ್ಯಾಪಿಸಿ ಸ-
ನ್ನ್ಯಾಯವಂತನಾಗಿ ಚೇಷ್ಟೆ ಮಾಳ್ಪ.
ವಾಯುವಂದಿತ ನಿತ್ಯ ವಿಜಯವಿಠಲರೇಯ
ಪ್ರೀಯನು ಕಾಣೋ ನಮಗೆ ಆನಾದಿರೋಗ ಕಳೆವ ॥1॥

ಮಟ್ಟತಾಳ

ಧನ್ವಂತರಿ ಶ್ರೀಧನ್ವಂತರಿ ಎಂದು
ಸನ್ನುತಿಸಿ ಸತತಾವಿಚ್ಛಿನ್ನ ಜ್ಞಾನದಿಂದ
ನಿನ್ನವ ನಿನ್ನವನೆಂದು ಘನತೆಯಲಿ ನೆನೆವ
ಮನುಜ ಭುವನದೊಳು ಧನ್ಯನೊ ಧನ್ಯನೊ.
ಘನ್ನ ಮೂರುತಿ ಒಲಿವ ವಿಜಯವಿಠಲ ಸುಪ್ರ-
ಸನ್ನ ಸತ್ಯನೆಂದು ಬಣ್ಣಿಸು ಬಹುವಿಧದಿ ॥ 2 ॥

ತ್ರಿಪುಟತಾಳ

ಶಶಿಕುಲೋದ್ಭವ ದೀರ್ಘಾತಮ ನಂದನ ದೇವ,
ಶಶಿವರ್ಣಪ್ರಕಾಶ ಪ್ರಭುವೆ ವಿಭುವೆ
ಶಶಿಮಂಡಲಸಂಸ್ಥಿತ ಕಲಶಪಾಣಿ
ಬಿಸಜಲೋಚನ ಆಶ್ವಿನೇಯವಂದ್ಯ!
ಶಶಿಗರ್ಭಭೂರುಹ ಲತೆ ತಾಪ ಓಡಿಸುವ
ಔಷಧಿ ತುಲಸಿಜನಕ ವಾಸುದೇವ !
ಅಸುರನಿರ್ಜರತತಿ ನೆರೆದು ಗಿರಿಯ ತಂದು
ಮಿಸುಕದೆ ಮಹೋದಧಿ ಮಥಿಸಲಾಗಿ
ನಸುನಗುತ ಪುಟ್ಟಿದೆ ಪೀಯೂಷಘಟ ಧರಿಸಿ.
ಅಸಮದೈವವೆ! ನಿನ್ನ ಮಹಿಮೆಗೆ ನಮೋ ನಮೋ
ಬಿಸಜಸಂಭವ ರುದ್ರ ಮೊದಲಾದ ದೇವತಾ.
ಋಷಿನಿಕರ ನಿನ್ನ ಕೊಂಡಾಡುವುದು
ದಶದಿಶದಲಿ ಮೆರೆವ ವಿಜಯವಿಠಲ ಭಿಷಕು
ಅಸು ಇಂದ್ರಿಯಂಗಳ ರೋಗನಿವಾರಣ ॥ 3 ॥

ಅಟ್ಟತಾಳ

ಶರಣು ಶರಣು ಧನ್ವಂತರಿ ತಮೋಗುಣನಾಶ,
ಶರಣು ಆರ್ತಜನಪರಿಪಾಲಕ, ದೇವ
ತರುವೇ, ಭವತಾಪಹರಣ, ದಿತಿಸುತ.
ಹರಣ ಮೋಹಕಲೀಲಾ ಪರಮ
ಪೂರಣ ಬ್ರಹ್ಮ, ಬ್ರಹ್ಮ ಉದ್ಧಾರಕ,
ಉರುಪರಾಕ್ರಮ ಉರುಕ್ರಮ ಉರಗಶಾಯಿ
ವರಕಿರೀಟ, ಮಹಾಮಣಿಕುಂಡಲಕರ್ಣ,
ಮಿರುಗುವ ಹಸ್ತಕಂಕಣ, ಹಾರಪದಕ,
ವರಗಾಂಚೀಪೀತಾಂಬರ, ಚರನಭೂಷಾ,
ಸಿರಿವತ್ಸಲಾಂಚನ ವಿಜಯವಿಠಲರೇಯ
ತರಣಿಗಾತರ, ಜ್ಞಾನಮುದ್ರಾಂಕಿತಹಸ್ತ ॥ 4 ॥

ಆದಿತಾಳ

ಏಳುವಾಗಲಿ, ಮತ್ತೆ ತಿರುಗುವಾಗಲಿ,
ಬೀಳುವಾಗಲಿ, ನಿಂದು ಕುಳ್ಳಿರುವಾಗಲಿ
ಹೇಳುವಾಗಲಿ ವಾರ್ತೆ ಕೇಳುವಾಗಲಿ, ಕರೆದು
ಪೇಳುವಾಗಲಿ, ಪೋಗಿ ಸತ್ಕರ್ಮ ಮಾಡುವಾಗ,
ಬಾಳುವಾಗಲಿ, ಭೋಜನ ನಾನಾ ಷಡ್ರಸ ಸಂ-
ಮೇಳವಾಗಲಿ, ಮತ್ತೆ ಪುತ್ರಾದಿಗಳೊಡನೆ
ಖೇಳವಾಗಲಿ ಮನುಜ ಮರೆಯಾದೆ ಒಮ್ಮೆ ತನ್ನ
ನಾಲಗೆ ಕೊನೆಯಲ್ಲಿ ಧನ್ವಂತರಿ ಎಂದು
ಕಾಲ ಅಕಾಲದಲ್ಲಿ ಸ್ಮರಿಸಿದ ಮಾನವಗೆ
ವ್ಯಾಳೆವ್ಯಾಳೆಗೆ ಬಹೊ ಭವಬೀಜ ಪರಿಹಾರ,
ನೀಲಮೇಘಶ್ಯಾಮ ವಿಜಯವಿಠಲರೇಯ
ವಾಲಗ ಕೊಡುವನು ಮುಕ್ತರ ಸಂಗದಲ್ಲಿ ॥ 5 ॥

ಜೊತೆ

ಧಂ ಧನ್ವಂತರಿ ಎಂದು ಪ್ರಣವಪೂರ್ವಕದಿಂದ
ವಂದಿಸಿ ನೆನೆಯಲು ವಿಜಯವಿಠಲ ಒಲಿವಾ

ಸಂಪೂರ್ಣಂ

॥ ಶ್ರೀಮಧ್ವಾತರ್ಗತ ಶ್ರೀಕೃಷ್ಣಾರ್ಪಣಮಸ್ತು ॥